ಕರ್ನಾಟಕ ವಿಧಾನ ಪರಿಷತ್ತು

(9)

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 24 (235 ಮತ್ತು 240)
2. ಸದಸ್ಯರ ಹೆಸರು : ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ (ನಾಮನಿರ್ದೇಶನ ಹೊಂದಿದವರು) ಹಾಗೂ ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
3. ಉತ್ತರಿಸುವ ದಿನಾಂಕ : 14.12.2021
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಸೋಮನಹಳ್ಳಿ ಕೈಗಾರಿಕಾ ಪ್ರದೇಶ ನಿರ್ಮಾಣಕ್ಕಾಗಿ ಭೂಸ್ವಾಧೀನಕ್ಕೊಳಪಟ್ಟಿರುವ ಸರ್ವೆ ನಂ: 29ರಲ್ಲಿ ಅನಧಿಕೃತವಾಗಿ ಖಾಸಗಿ ವ್ಯಕ್ತಿಗಳು ವಸತಿ ಬಡಾವಣೆ ನಿರ್ಮಿಸಿ, ನಿವೇಶನಗಳನ್ನು ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಸೋಮನಹಳ್ಳಿ ಕೈಗಾರಿಕಾ ಪ್ರದೇಶಕ್ಕಾಗಿ ಭೂಸ್ವಾಧೀನಪಡಿಸಿರುವ ಜಮೀನುಗಳ ಪೈಕಿ ಸೋಮನಹಳ್ಳಿ ಗ್ರಾಮದ ಸರ್ವೆ ನಂ: 29 ರಲ್ಲಿನ 3-16 ಎಕರೆ ಸರ್ಕಾರಿ ಜಮೀನು ಸಹ ಒಳಗೊಂಡಿರುತ್ತದೆ. ಈ ಜಮೀನನ್ನು ಮಂಡಳಿಗೆ ಮಂಜೂರು ಮಾಡುವ ಸಂಬಂಧ ಜಿಲ್ಲಾಧಿಕಾರಿ, ಮಂಡ್ಯ ಜಿಲ್ಲೆ ಇವರು ದಿನಾಂಕ: 24.11.2000 ರಂದು ಹೊರಡಿಸಿರುವ ಅಧಿಕೃತ ಜ್ಞಾಪನ ಪತ್ರದಲ್ಲಿ ತಿಳಿಸಿರುವಂತೆ, ಪ್ರಸ್ತಾವಿತ ಜಮೀನಿನ ಮಾರುಕಟ್ಟೆ ಬೆಲೆ, ಪರಿವರ್ತನಾ ಶುಲ್ಕ ಮತ್ತು ಪೋಡಿ ಶುಲ್ಕ ಸೇರಿ ಒಟ್ಟು ರೂ.2,37,239/-ಗಳನ್ನು ದಿನಾಂಕ: 29.10.2004 ರಂದು ತಹಶೀಲ್ದಾರ್, ಮದ್ದೂರು ತಾಲ್ಲೂಕು ಇವರಿಗೆ ಜಮಾ ಮಾಡಲಾಗಿದೆ. ಈ ಸರ್ಕಾರಿ ಜಮೀನು ಈಗಾಗಲೇ ಕೆ.ಐ.ಎ.ಡಿ.ಬಿ.ಗೆ ಮಂಜೂರಾಗಿದ್ದು, ಜಮೀನನ್ನು ಭೌತಿಕವಾಗಿ ಕೆ.ಐ.ಎ.ಡಿ.ಬಿ.ಗೆ ಹಸ್ತಾಂತರಿಸುವಂತೆ ವಿಶೇಷ ಭೂಸ್ವಾಧೀನಾಧಿಕಾರಿ, ಮೈಸೂರು ಇವರು ತಹಶೀಲ್ದಾರ್, ಮದ್ದೂರು ತಾಲ್ಲೂಕು ಇವರಿಗೆ ಬರೆದ ದಿನಾಂಕ: 06.11.2019 ರ ಪತ್ರದಲ್ಲಿ ಕೋರಿದ್ದು, ಸದರಿ ಜಮೀನು ಕಂದಾಯ ಇಲಾಖೆಯಿಂದ ಭೌತಿಕವಾಗಿ ಮಂಡಳಿಗೆ ಹಸ್ತಾಂತರವಾಗಲು ಬಾಕಿಯಿದ್ದು, ಈ ಜಮೀನಿನಲ್ಲಿ ಅಕ್ರಮವಾಗಿ ಖಾಸಗಿ ಮಾಲೀಕತ್ವದಲ್ಲಿ ಬಡಾವಣೆಗಳು ನಿರ್ಮಾಣಗೊಳ್ಳುವುದನ್ನು
(ಆ)	ಹಾಗಾದಲ್ಲಿ, ಎಷ್ಟು ಎಕರೆ ವಿಸ್ತೀರ್ಣದಲ್ಲಿ ಅನಧಿಕೃತ ಬಡಾವಣೆಗಳನ್ನು ನಿರ್ಮಿಸಲಾಗಿದೆ;	
(ಇ)	ಅನಧಿಕೃತ ಬಡಾವಣೆ ನಿರ್ಮಾಣದಲ್ಲಿ ಕೆ.ಐ.ಎ.ಡಿ.ಬಿ. ಅಧಿಕಾರಿಗಳು ಶಾಮೀಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	

		ತಡೆಯುವಂತೆ ಹಾಗೂ ಸದರಿ ಸರ್ಕಾರಿ ಜಮೀನನ್ನು ಮಂಡಳಿಗೆ ಭೌತಿಕವಾಗಿ ಹಸ್ತಾಂತರಿಸುವಂತೆ ಕಂದಾಯ ಇಲಾಖೆಯನ್ನು ಕೋರಲಾಗಿದೆ.
(ಈ)	ಸೋಮನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಇದುವರೆಗೆ ಹಂಚಿಕೆ ಪಡೆದಿರುವ ಉದ್ದಿಮೆದಾರರು ಅವರ ಯೋಜನೆಗಳನ್ನು ಪೂರ್ಣ ಪ್ರಮಾಣದಲ್ಲಿ ಪ್ರಾರಂಭಿಸಿ, ಕ್ರಯ ಪತ್ರ ಪಡೆದಿರುವವರ ಸಂಖ್ಯೆ ಎಷ್ಟು; ಹಾಗೂ ಪೂರ್ಣ ಪ್ರಮಾಣದ ಯೋಜನೆ ಅನುಷ್ಠಾನಗೊಳಸದೆ, ಶುದ್ಧ ಕ್ರಯ ಪತ್ರ ಪಡೆದಿರುವವರ ಸಂಖ್ಯೆ ಎಷ್ಟು:	1975ನೇ ಸಾಲಿನಲ್ಲಿ ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಸೋಮನಹಳ್ಳಿ ಗ್ರಾಮದ 155-30 ಎಕರೆ ವಿಸ್ತೀರ್ಣದ ಜಮೀನಿನಲ್ಲಿ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಿದ್ದು, ಈ ಪೈಕಿ ಹಂಚಿಕೆಗೆ ಲಭ್ಯವಿದ್ದ 135 ಎಕರೆ ಜಮೀನನ್ನು 97 ಘಟಕಗಳಿಗೆ ಹಂಚಿಕೆ ಮಾಡಲಾಗಿದೆ. ಈ ಪೈಕಿ 87 ಘಟಕಗಳು ನಿಹಂಚಿಕೆಯಾದ ಜಮೀನನ್ನು ನಿಯಮಾನುಸಾರ ಬಳಕೆ ಮಾಡಿಕೊಂಡು ಯೋಜನೆಯನ್ನು ಅನುಷ್ಠಾನಗೊಳಸಿದ್ದು, ಅದರಲ್ಲಿ 81 ಘಟಕಗಳಿಗೆ ಶುದ್ಧ ಕ್ರಯ ಮಾಡಿಕೊಡಲಾಗಿದೆ.
(ಉ)	ನಿವೇಶನ ಹಂಚಿಕೆ / ಸ್ವಾಧೀನ ಪತ್ರ ಪಡೆದು, 3 ವರ್ಷಗಳಾದರೂ ಯೋಜನೆ ಅನುಷ್ಠಾನಗೊಳಸದೆ, ಖಾಲಿ ನಿವೇಶನ ಹೊಂದಿರುವ ಹಂಚಿಕೆದಾರರ ಸಂಖ್ಯೆ ಎಷ್ಟು; (ಪೂರ್ಣ ವಿವರ ನೀಡುವುದು)	ಹಂಚಿಕೆ ಪಡೆದು, ಯೋಜನೆಗಳನ್ನು ಅನುಷ್ಠಾನಗೊಳಸಿದ 87 ಘಟಕಗಳನ್ನು ಹೊರತುಪಡಿಸಿ, ಉಳಿಕೆ 10 ಘಟಕಗಳಲ್ಲಿ ಪ್ರಸ್ತುತ 4 ಘಟಕಗಳು ಸ್ಥಗಿತಗೊಂಡಿದ್ದು, 6 ಘಟಕಗಳು ನಿಗದಿತ ಅವಧಿಯೊಳಗೆ ಹಂಚಿಕೆಯಾದ ಜಮೀನಿನಲ್ಲಿ ಯೋಜನೆಯನ್ನು ಅನುಷ್ಠಾನಗೊಳಸಲು ವಿಫಲರಾದ ಕಾರಣ, ಕೆ.ಐ.ಎ.ಡಿ. ಕಾಯ್ದೆ 1966 ರನ್ವಯ ಕಲಂ 34-ಬಿ ನೋಟಿಸ್ ಜಾರಿ ಮಾಡಿದ್ದು, ಈ ಪ್ರಕರಣಗಳು ವಿಚಾರಣಾ ಹಂತದಲ್ಲಿದೆ.
(ಊ)	ನಿಯಮಾನುಸಾರ 3 ವರ್ಷಗಳಾದರೂ ಯೋಜನೆ ಅನುಷ್ಠಾನಗೊಳಸದಿರುವ ಹಂಚಿಕೆದಾರರ / ಉದ್ದಿಮೆದಾರರ ಹಂಚಿಕೆಯನ್ನು ರದ್ದುಪಡಿಸದಿರಲು ಕಾರಣಗಳೇನು? (ವಿವರ ನೀಡುವುದು)	

(ಮುರುಗೇಶ ಆರ್. ನಿರಾಣಿ)

ಸಂಖ್ಯೆ: ಸಿಐ 228 ಐಎಪಿ (ಇ) 2021

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು